ನಮಗೆ ಆಶ್ಚರ್ಯವನ್ನುಂಟುಮಾಡಿತು. ಅವನು ಕೇವಲ ಕಾವಿ ಧಾರಿ ಮಾತ್ರ; ನಿಜವಾದರ್ಥದಲ್ಲಿ ಸಾಧುವೇನಲ್ಲ ಎಂದು ಅದ ರಿಂದ ತಿಳಿದುಕೊಂಡೆವು.

## ೪. ಮರಳಿ ಹರಿದ್ವಾರಕ್ಕೆ


ಹೆಚ್ಚು ತಡಮಾಡದೆ ನಾವು ಅಲ್ಲಿಂದ ಹಿಂದಿರುಗಲು ನಿರ್ಧರಿ ಸಿದೆವು. ಪ್ರಕೃತಿಯ ಸೊಬಗನ್ನು ಸವಿಯುತ್ತ, ಮಾತುಕತೆಯಾಡುತ್ತ, ನಾವು ನಿಧಾನವಾಗಿ ಮುಂದುವರಿದೆವು. ಈಗ ನಮ್ಮಲ್ಲಿ ಪಂಚ ಕೇದಾರ ಯಾತ್ರೆ ಪೂರೈಸಿದ ಧನ್ಯತಾಭಾವ ಉಕ್ಕಿ ಹರಿಯತೊಡ ಗಿತು. ಆದರೆ ಹದಿನೈದು ದಿನಗಳ ಯಾತ್ರೆಯಿಂದ ಉಂಟಾದ ಆಯಾಸವೆಲ್ಲ ಈಗ ಒಮ್ಮೆಲೆ ಸ್ಫೋಟಗೊಂಡಂತೆ, ಹೇಗಾದರೊಮ್ಮೆ ಹರಿದ್ವಾರಕ್ಕೆ ತಲುಪಿಬಿಟ್ಟರೆ ಸಾಕು ಅನಿಸತೊಡಗಿತ್ತು. ಸ್ವಾಮಿ ಕರುಣಾಕರಾನಂದರೂ ತುಸು ಅಸಮಾಧಾನಗೊಂಡು 'ಹೇಗಾದ ರೊಮ್ಮೆ ಹೊರಟು ತಲುಪಿ ಬಿಡೋಣ' ಎಂದು ವೇಗವಾಗಿ ಹೆಜ್ಜೆ ಹಾಕತೊಡಗಿದರು. ಎಲ್ಲಿ ಜೀಪ್ ಮೂಲಕ ಬಂದಿಳಿದಿದ್ದೆವೋ ಅಲ್ಲಿಗೆ ಬಂದು ತಲುಪಿದೆವು. ಹೊಟ್ಟೆ ಹಸಿದಿತ್ತು; ಆದರೆ ಅಲ್ಲಿ ಹೋಟೆಲುಗಳಲ್ಲಿ ಊಟ ಇತ್ಯಾದಿ ವ್ಯವಸ್ಥೆ ಚೆನ್ನಾಗಿದ್ದಂತೆ ಕಾಣ ಲಿಲ್ಲ. ಅಲ್ಲೊಂದು ಜೀಪ್ ಹೆಲಂಗ್ ಮೂಲಕವಾಗಿ ಚಮೋಲಿಗೆ ಹೊರಟು ನಿಂತಿತ್ತು. ರಾತ್ರಿಯೊಳಗಾಗಿ ಹರಿದ್ವಾರ ತಲುಪುವುದು ಅಸಂಭವವಾಗಿತ್ತು. ಹರಿದ್ವಾರದ ದಾರಿಯಲ್ಲಿ ಎಷ್ಟು ದೂರದ ತನಕ ಸಾಗಬಹುದೋ, ಅಷ್ಟು ದೂರ ಕ್ರಮಿಸಿ ಬಿಡೋಣ ಎಂದು ನಾವು ಅಂದುಕೊಂಡಿದ್ದೆವು. ಆದ್ದರಿಂದ, ಊಟ ಮಾಡದಿದ್ದರೂ ಪರವಾ ಗಿಲ್ಲ , ಹೊರಟು ಬಿಡೋಣ ಎಂದು ಜೀಪ್ ಏರಿಬಿಟ್ಟೆವು. ಆದರೆ ಜೀಪ್ ಬಿಡಲು ಡ್ರೈವರ್ ತಡ ಮಾಡಿದ. ಯಾವುದೋ ನೂತನ ವಧುವರರು, ಇತರರು ಬರುವವರಿದ್ದಾರೆ ಎಂದು ತಿಳಿದ ಅವನು ಅವರಿಗಾಗಿ ಕಾಯುತ್ತ ನಿಂತ. ಕೊನೆಗೂ ಜೀಪ್ ಹೊರಟಿತು. ಸುಮಾರು ೧.೧೫ ಕ್ಕೆ ಅಲ್ಲಿಂದ ಜೀಪ್ ಹೊರಟು, ೨.೪೫ರ ಹೊತ್ತಿಗೆ ಚಮೋಲಿ ತಲುಪಿತು. ಚಮೋಲಿಯಿಂದ ಹರಿದ್ವಾರಕ್ಕೆ ಹೋಗುವ ಬಸ್ ಇನ್ನು ಸಿಗಲಾರದು; ಶ್ರೀನಗರದ (ಕಾಶ್ಮೀರದ ಶ್ರೀನಗರವಲ್ಲ, ಉತ್ತರಾಖಂಡದ ಒಂದು ಪ್ರಮುಖ ಪಟ್ಟಣ) ವರೆಗಾದರೂ ಹೋಗಬಹುದು ಎಂದು ನಾವು ಜೀಪ್‌ಗಳು ನಿಂತಿರುವ ಜಾಗಕ್ಕೆ ಕೇಳಿ ವಿಚಾರಿಸಿದರೆ ಅವರು, 'ಇನ್ನು ಶ್ರೀನಗರಕ್ಕೆ? ಯಾವ ಗಾಡಿಯೂ ಸಿಗಲಾರದು. ನೀವು ಇಲ್ಲೇ ಎಲ್ಲಾದರೂ ತಂಗುವುದು ಒಳ್ಳೆಯದು' ಎಂದು ನಗುತ್ತ ಹೇಳಿದರು. ಯಾವ ಜೀಪನ್ನು ವಿಚಾ ರಿಸಿದರೂ ಅವರು, 'ಇನ್ನು ನಾಳೆ ಬೆಳಿಗ್ಗೆ ಹೊರಡಿ' ಎಂದಿದ್ದರು. ನಾವೇ ಬಾಡಿಗೆ ಮಾಡಿ ಹೋಗುವುದಿದ್ದರೆ ಬರುತ್ತಾರೆ, ಅದಕ್ಕೆ ದೊಡ್ಡ ಮೊತ್ತದ ಹಣ ಕೇಳಿದರು. ಇನ್ನೇನು ಮಾಡಲಿ ಎಂದು ನಾವು ಆಲೋ ಚಿಸುತ್ತಿರುವಷ್ಟರಲ್ಲಿ ಒಂದು ಬಸ್ ಬಂದೇ ಬಿಟ್ಟಿತು. 'ಉತ್ತರಾಖಂಡ ಪರಿವಹನ', ಸರ್ಕಾರಿ ಬಸ್. ಅದನ್ನು ಏರಿ ಕುಳಿತ ನಾವು ಶ್ರೀನಗರ ತನಕ ಟಿಕೆಟ್ ಪಡೆದೆವು. ''ಹರಿದ್ವಾರಕ್ಕೆ ಎಷ್ಟು ಹೊತ್ತಿಗೆ ತಲುಪು ತ್ತೀಯಾ?'' ಎಂದು ಕಂಡಕ್ಟರನನ್ನು ಕೇಳಿದಾಗ ಅವನು 'ರಾತ್ರಿ ಒಂದು ಗಂಟೆಗೆ' ಎಂದ. ನಡುರಾತ್ರಿ ಹರಿದ್ವಾರ ತಲಪಿ, ಆಶ್ರಮಕ್ಕೆ ಹೋಗಿ, ಅಲ್ಲಿ ನಿದ್ರಿಸುತ್ತಿರುವವರನ್ನು ಎಬ್ಬಿಸಿ, ನಮ್ಮ ನಿದ್ದೆಯೂ ಕೆಟ್ಟು, ಎಲ್ಲ ತೊಂದರೆಯಾಗುವುದಕ್ಕಿಂತ ರಾತ್ರಿ ಶ್ರೀನಗರದಲ್ಲೇ ತಂಗಿ, ಬೆಳಿಗ್ಗೆ ಹರಿದ್ವಾರಕ್ಕೆ ಆರಾಮವಾಗಿ ಹೊರಟರಾಯಿತು ಎಂದು ನಾವು ನಿಶ್ಚಯಿಸಿದೆವು. ಬಸ್ ವೇಗವಾಗಿ ಶ್ರೀನಗರದತ್ತ ಹೊರಟಿತು. ಸಂಜೆ ೬.೩೦ಕ್ಕೆ ಬಸ್ ಶ್ರೀನಗರ ತಲುಪಿತು. ಅಲ್ಲೊಂದು ಲಾಡ್ಜ್‌ನಲ್ಲಿ ತಂಗಿದೆವು. ರಾತ್ರಿ ಹೋಟೆಲಿನಲ್ಲಿ ಊಟ ಮಾಡಿ ಬಂದು ಮಲಗಿ ಕೊಂಡೆವು; ಅಷ್ಟೊಂದು ಆಯಾಸವಾಗಿದ್ದರೂ ಅಲ್ಲಿನ ಸೆಕೆ ತಡೆಯ ಲಾಗಲಿಲ್ಲ. ಇಡೀ ರಾತ್ರಿ ನಮಗೆ ನಿದ್ದೆ ಬರಲಿಲ್ಲ.

ಬೆಳಿಗ್ಗೆ ೪ ಗಂಟೆಗೆ ಎದ್ದು ಸ್ನಾನಾದಿಗಳನ್ನು ಮುಗಿಸಿ, ೫ ಗಂಟೆಯ ಹೊತ್ತಿಗೆ ಬಸ್‌ಸ್ಟಾಂಡಿಗೆ ಬಂದೆವು. ಅಲ್ಲಿ ಹರಿದ್ವಾರಕ್ಕೆ ನೇರ ಹೋಗುವ ಒಂದು ಬಸ್ ಹೊರಟು ನಿಂತಿತ್ತು. ಅದನ್ನೇರಿ ಕುಳಿತೆವು. ಆದರೆ ಬಸ್ ಹೊರಟದ್ದು ೫.೪೫ಕ್ಕೆ. ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ಹರಿದ್ವಾರ ತಲುಪಿದೆವು. ಬಸ್ಸಿನಲ್ಲಿ ನಿದ್ದೆ ಮಾಡಿ ದೆವು; ಆದರೂ ಆಯಾಸ ಪೂರ್ಣವಾಗಿ ಹೋಗಿರಲಿಲ್ಲ. ಹರಿದ್ವಾರ ಆಶ್ರಮಕ್ಕೆ ಹೋಗಿ ಇನ್ನೂ ಚೆನ್ನಾಗಿ ವಿಶ್ರಾಂತಿ ಪಡೆಯುವುದೆಂದು ನಿರೀಕ್ಷಿಸಿದೆವು. ಬಸ್ ಕನಖಲ್ ಸೇವಾಶ್ರಮದ ಬಳಿ ಬಂದು ನಿಂತಾಗ, ಬಸ್ ಇಳಿದೆವು. ಪಂಚಕೇದಾರದ ಯಾತ್ರೆಯ ಆಯಾ ಸದ ಭಾರದೊಂದಿಗೆ, ದಿವ್ಯದರ್ಶನದ ಅನುಭವಗಳನ್ನೆಲ್ಲ ಮನಸ್ಸಿನ ಹಿನ್ನೆಲೆಯಲ್ಲಿ ಇಟ್ಟುಕೊಂಡು ನಾವು ಕನಖಲ್ ಸೇವಾಶ್ರಮವನ್ನು ಸೇರಿದೆವು.

## ಉಪಸಂಹಾರ

ಪಂಚಕೇದಾರದ ಯಾತ್ರೆ ಹೀಗೆ ಪೂರ್ಣಗೊಂಡಿತು. ಕೇದಾರ ನಾಥದ ಶಾಂತ, ಹಿಮಾಚ್ಛಾದಿತ ಪರಿಸರ, ಪರಶಿವನ ಭವ್ಯ ಸಾನ್ನಿಧ್ಯ; ಮದ್ದಮಹೇಶ್ವರದ ಏಕಾಂತತೆ ಹಾಗೂ ಅನನ್ಯತೆ; ತುಂಗ ನಾಥದ ಉತ್ತುಂಗ ಶಿಖರ ಹಾಗೂ ಅನ್ಯಾದೃಶ ದೃಶ್ಯವೈಭವ; ರುದ್ರನಾಥದ ರುದ್ರರಮಣೀಯ ಅಲೌಕಿಕತೆ; ಕೊನೆಗೆ ಕಲ್ಪೇಶ್ವರದ ಆತ್ಮೀಯ ಕೃಪಾಪೂರ್ಣ ದರ್ಶನ – ಇವೆಲ್ಲ ನಮ್ಮ ಮನಃಪಟಲದಲ್ಲಿ ಚಿರಮುದ್ರೆಯನ್ನು ಮೂಡಿಸಿವೆ. ಅನೇಕ ಏರುಪೇರುಗಳು, ವಿಚಿತ್ರ ಅನುಭವಗಳ ಸರಣಿ, ನಿತ್ಯನೂತನವಾದ ಸ್ಫೂರ್ತಿಮಯ ಪ್ರಕೃತಿ ವೈಚಿತ್ರ್ಯಗಳು, ಓಹೋ – ಎಲ್ಲಕ್ಕಿಂತ ಮಿಗಿಲಾಗಿ ಪ್ರಾಪಂಚಿಕ ಕೋಟಲೆಗಳಿಂದ ಬಳಲಿ ಬೆಂಡಾದ ಹೃದಯಕ್ಕೆ ತಂಪೆರೆಯುವ ದಿವ್ಯ ಮನೋಹರ ಭಗವತ್ಕೃಪೆ : ಇವು ನಾವು ಪಂಚಕೇದಾರ ಯಾತ್ರೆಯಲ್ಲಿ ಪಡೆದ ಅಪೂರ್ವ ಅನುಭವಗಳು. ಇವನ್ನು ಮನಸ್ಸಿಗೆ ತಂದು ಕೊಂಡಾಗ ಅಲ್ಲಿಗೆ ಮತ್ತೆ ಹೋಗಬೇಕು, ಎಷ್ಟು ಕಷ್ಟವಾದರೂ ಸರಿ, ಎಷ್ಟು ಖರ್ಚಾದರೂ ಸರಿ; ನಾವು ತೆತ್ತುದಕ್ಕಿಂತ ಹತ್ತು ಪಟ್ಟು, ಇಲ್ಲ, ನೂರುಪಟ್ಟು ಹೆಚ್ಚಿನದನ್ನು ಪಡೆಯುತ್ತೇವೆ ಅನಿಸುತ್ತದೆ. ಈ ಯಾತ್ರೆಯುದ್ದಕ್ಕೂ ನಮ್ಮನ್ನು ಸದಾ ಕಾಯುತ್ತಿದ್ದ, ನಮ್ಮ ಮರೆವಿನ ಕ್ಷಣಗಳಲ್ಲೂ ನಿತ್ಯ ಜಾಗೃತರಾಗಿರುವ ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರನ್ನು ಸ್ಮರಿಸಿಕೊಂಡು ಈ ಪ್ರವಾಸಕಥನವನ್ನು ಮುಗಿಸುತ್ತಿದ್ದೇನೆ.

*(ಮುಕ್ತಾಯ)* ✳



# ದೇವರ ಹಾದಿಯಲ್ಲಿ ನಡೆದ ಅವಿಲಾದ ತೆರೆಸಾ

ಸ್ವಾಮಿ ವೀರೇಶಾನಂದ




ಅವಿಲಾದ ತೆರೆಸಾ (Teresa of Ávila) ಹುಟ್ಟಿದ್ದು ಸ್ಪೈನ್ ದೇಶಕ್ಕೆ ಸೇರಿದ ಅವಿಲಾ ಎಂಬ ಪಟ್ಟಣದಲ್ಲಿ , ೧೫೧೫ರ ಮಾರ್ಚ್ ೨೮ರಂದು. ಇದಕ್ಕೆ ಇಪ್ಪತ್ತು ವರ್ಷಗಳ ಹಿಂದೆ ಕೊಲಂಬಸ್ ಅಮೆರಿಕ ಭೂಖಂಡವನ್ನು ಕಂಡುಹಿಡಿದ್ದನು. ಎರಡು ವರ್ಷಗಳ ಮುಂಚೆ ಮಾರ್ಟಿನ್ ಲೂಥರ್ ಕಿಂಗ್ ಪ್ರೊಟೆಸ್ಟಂಟ್ ಆಂದೋಲನವನ್ನು ಹುಟ್ಟುಹಾಕಿದ್ದನು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಮಹಾನ್ ಸಂತಳೊಬ್ಬಳ ಜನ್ಮವಾಯಿತು; ಆಂತರಿಕ ಶಾಂತಿಗಾಗಿ ವ್ಯಾಕುಲತೆಯ, ಸಮಾನಾಂತರ ಆಂದೋಲನವೊಂದರ ಅಂಕುರವಾಯಿತು.

ಈಕೆಯ ತಂದೆತಾಯಿಗಳಿಬ್ಬರೂ ಶ್ರದ್ಧಾವಂತ ಕ್ಯಾಥೊಲಿಕ್ ಭಕ್ತರು. ಅವರು ಹಲವಾರು ವಿಧಾನಗಳಿಂದ ತಮ್ಮ ಮಗಳನ್ನು ಪ್ರಾರ್ಥನೆಯ ಜೀವನವನ್ನು ಕೈಗೊಳ್ಳುವಂತೆ ಉತ್ತೇಜಿಸಿದರು. ಚಿಕ್ಕ ಮಗುವಾಗಿದ್ದಾಗಲೇ ತೆರೆಸಾ ಧಾರ್ಮಿಕ ಮನೋಭಾವದ ಚಿಹ್ನೆಗಳನ್ನು ತೋರ್ಪಡಿಸಲು ಆರಂಭಿಸಿದಳು. ಏಕಾಂತದಲ್ಲಿ ಕುಳಿತು ಮೌನವಾಗಿ ಪ್ರಾರ್ಥನೆ ಮಾಡುವಳು. ಬಡವರಿಗೆ ದಾನ ಮಾಡುವಲ್ಲಿ ಸಂತೋಷ ಕಾಣುವಳು. ತೆರೆಸಾಳಿಗೆ ಅಮ್ಮನೆಂದರೆ ಅಚ್ಚುಮೆಚ್ಚು. ತಂದೆಯೆಂದರೆ ಭಯ. ತಂದೆಯೋ ಶಿಸ್ತಿನ ಸಿಪಾಯಿ. ತಾಯಿ ತೆರೆಸಾಳಿಗೆ ಪ್ರೀತಿಯ ಆರೈಕೆಯನ್ನು ನೀಡುವಳು. ಆದರೆ ದುರದೃಷ್ಟವಶಾತ್ ತೆರೆಸಾ ಹದಿಹರೆಯದಲ್ಲಿದ್ದಾಗಲೇ ತಾಯಿ ಮರಣಹೊಂದಿದಳು. ಯುವ ತೆರೆಸಾಳ ಹೃದಯದ ಮೇಲೆ ಅದು ಆರದ ಗಾಯವನ್ನು ಉಂಟುಮಾಡಿತು. ಅವಳ ಮನಸ್ಸು ತಲ್ಲಣಿಸಿತು. ದುಮ್ಮಾನಗೊಂಡ ತೆರೆಸಾ ತಾನೇತಾನಾಗಿ ಸಾಂತ್ವನಕ್ಕಾಗಿ ಮಾತೆ ಮೇರಿಯ ಮೊರೆಹೋಗುತ್ತಾಳೆ. ಇದನ್ನು ಅವಳ ಮಾತುಗಳಿಂದಲೇ ಕೇಳೋಣ:

''ನಾನು ಭಗವಂತನ ತಾಯಿಯ ವಿಗ್ರಹದ ಮುಂದೆ ಹತಾಶಳಾಗಿ ಬಿದ್ದುಕೊಂಡೆ. ಧಾರಾಕಾರ ಕಣ್ಣೀರು ಸುರಿಸುತ್ತಿದ್ದೆ. 'ತಾಯೇ, ಈಗ ನೀನು ಮಾತ್ರವೇ ನನ್ನ ತಾಯಿಯಾಗಬೇಕು' ಎಂದು ಬೇಡಿಕೊಂಡೆ. ಶಿಶುಸಹಜ ಸರಳತೆಯಿಂದ ಆಡಿದ ಈ ಪ್ರಾರ್ಥನೆಯನ್ನು ಆಕೆ ಆಲಿಸಿದಳು. ಅಂದಿನಿಂದ ಇಂದಿನವರೆಗೂ ನಾನು ಮೇರಿಗೆ ಮಾಡಿದ ಪ್ರಾರ್ಥನೆ ಎಂದಿಗೂ ವಿಫಲವಾಗಿಲ್ಲ. ''

ಇಷ್ಟಾದರೂ ಹದಿಹರೆಯದ ತುಂಬುಯೌವನ ಅವಳನ್ನು ತನ್ನ ಶ್ರದ್ಧೆ ಮತ್ತು ಭಕ್ತಿಗಳಿಂದ ದೂರ ಕೊಂಡೊಯ್ದುಬಿಟ್ಟಿತು. ಅವಳು ಪ್ರಾಪಂಚಿಕ ಸಂಗತಿಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡಳು. ಬೆಲೆಬಾಳುವ ಉಡುಪುಗಳು, ಹುಡುಗರು, ಆಟ-ವಿನೋದ, ಜಗಳ ಇವುಗಳಲ್ಲೇ ಅವಳ ಮನಸ್ಸು ಹರಿಯಿತು. ಅವಳ ಸ್ವಾಭಾವಿಕ ಸೌಂದರ್ಯ ಹಲವಾರು ಜನರನ್ನು ಅವಳತ್ತ ಆಕರ್ಷಿಸಿತು. ಇವಳಿಗೂ ಹೆಚ್ಚು ಹೆಚ್ಚು ಸ್ನೇಹಿತರನ್ನು ಮಾಡಿಕೊಳ್ಳಬೇಕು ಎಂಬ ಕಾತರ. ಆದರೆ ಮನಸ್ಸಿನ ಅಂತರಾಳದಲ್ಲಿ ಅವಳಿಗೆ ಶಾಂತಿಯಿರಲಿಲ್ಲ. ತನ್ನ ಈ ದಿನಗಳ ಪಾಪದ ಪ್ರಜ್ಞೆ ಅವಳನ್ನು ಮುಂದಿನ ದಿನಗಳಲ್ಲಿಯೂ ಕಾಡುತ್ತಿತ್ತು. ಹೀಗಾಗಿ ತಾನು 'ಕಡುಕಷ್ಟದಲ್ಲಿರುವ ಪಾಪಿ' ಎಂದು ಒಮ್ಮೊಮ್ಮೆ ಅವಳು ಭಾವಿಸಿಕೊಳ್ಳುತ್ತಿದ್ದಳು. ಅವಳು ದೊಡ್ಡ ತಪ್ಪೇನನ್ನೂ ಆ ಕಾಲದಲ್ಲಿ ಮಾಡಿರಲಿಲ್ಲ. ಆದರೂ ದೊಡ್ಡವಳಾದಾಗ ತನ್ನ ವಿಷಯದಲ್ಲಿ ಬಹು ಕ್ರೂರವಾದ ವಿಮರ್ಶೆ ಮಾಡಿಕೊಂಡಿದ್ದಳು, ಅಷ್ಟೆ. ಇದಲ್ಲದೆ ತಂದೆ ಹೇರಿದ್ದ ಧಾರ್ಮಿಕ ಶಿಸ್ತು ಕೂಡ ಇಂಥ ಪಾಪಪ್ರಜ್ಞೆಗೆ ಕಾರಣವಾಗಿದ್ದಿರಬಹುದು. ಇವಳ ಈ ನಡತೆಯನ್ನು ಸರಿಪಡಿಸಲು ತಂದೆ ತಾಯಿಗಳು ಅವಳನ್ನು ವಿದ್ಯಾಭ್ಯಾಸದ ಸಲುವಾಗಿ ಒಂದು ಸಂನ್ಯಾಸಿನಿಯರ ಮಠಕ್ಕೆ ಕಳುಹಿಸಿದರು. ಆಗ ಅವಳ ವಯಸ್ಸು ಕೇವಲ ೧೬.

ಸಂನ್ಯಾಸಿನಿಯರ ಮಠದ ವಾಸ್ತವ್ಯ ತೆರೆಸಾಳಲ್ಲಿ ಆಧ್ಯಾತ್ಮಿಕ ಜೀವನದಲ್ಲಿನ ಆಸಕ್ತಿಯನ್ನು ಮತ್ತೆ ಕುದುರಿಸಿತು. ದೀರ್ಘವಾಗಿ ಆಲೋಚಿಸಿದ ನಂತರ ಅವಳು ಕಾರ್ಮಲೈಟ್ ಸಂಪ್ರದಾಯದ ಸಂನ್ಯಾಸಿನಿಯಾಗಲು ನಿರ್ಧರಿಸಿದಳು. ಆದರೆ ಆ ಕಾಲದ ಸಂನ್ಯಾಸಿನಿಯರ ಮಠಗಳಲ್ಲಿ ನಿಯಮಗಳು ಬಹಳ ಸಡಿಲಗೊಂಡಿದ್ದವು. ಸಂನ್ಯಾಸಿನಿಯರು ಐಷಾರಾಮಿ ಜೀವನವನ್ನು ನಡೆಸುತ್ತಿದ್ದರು. ಹೊರಗಿನಿಂದ ಅನೇಕ ಜನ ಸಂದರ್ಶಕರು ಬರುತ್ತಿದ್ದರು. ನಿಯಮಬದ್ಧ ಆಧ್ಯಾತ್ಮಿಕ ಜೀವನಕ್ಕೆ ಪ್ರಾಶಸ್ತ್ಯವಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಪ್ರಾರ್ಥನೆಗೆ ಏಕಾಂತವನ್ನು ಹಾಗೂ ಸೂಕ್ತ ಸಮಯವನ್ನು ಕಲ್ಪಿಸಿಕೊಳ್ಳುವುದಕ್ಕೆ ತೆರೆಸಾ ಬಹಳ ಕಷ್ಟಪಡಬೇಕಾಯಿತು.

ಈ ಸಂದರ್ಭದಲ್ಲಿ ತೆರೆಸಾ 'ಮಾನಸಿಕ ಪ್ರಾರ್ಥನೆ' ಎನ್ನುವ ನೂತನ ವಿಧಾನದ ಪ್ರಾರ್ಥನೆಯನ್ನು ಅಭ್ಯಾಸ ಮಾಡಿದಳು. ಈ ಬಗ್ಗೆ ತಾನು ರಚಿಸಿದ 'ಆತ್ಮಚರಿತ್ರೆ'ಯಲ್ಲಿ ಆಕೆ ಹೀಗೆ ಬರೆದುಕೊಳ್ಳುತ್ತಾಳೆ: ''ಏಸುಕ್ರಿಸ್ತ ಪ್ರಭುವನ್ನು ನನ್ನ ಅಂತರಂಗದಲ್ಲಿ ಕಾಪಾಡಿಕೊಳ್ಳುವುದಕ್ಕೆ ನಾನು ಇನ್ನಿಲ್ಲದ ಪ್ರಯತ್ನವನ್ನು ಮಾಡಿದೆ... ಆದರೆ ನನ್ನ ಕಲ್ಪನಾಶಕ್ತಿಯು ಅಷ್ಟೊಂದು ಸಾಮರ್ಥ್ಯದಿಂದ ಕೂಡಿರಲಿಲ್ಲ ಎಂದೇ ಹೇಳಬೇಕು. ಕಲ್ಪನೆಗೆ ಹಾಗೂ ದೇವತಾಶಾಸ್ತ್ರದ ಹಲವು ಭಾವನೆಗಳನ್ನು ಅಭ್ಯಾಸ ಮಾಡಲು ಬೇಕಾದ ಪ್ರತಿಭೆ ನನಗೆ ಇರಲಿಲ್ಲ.'' ತೆರೆಸಾ ಸುಮಾರು ಹದಿನೆಂಟು ವರ್ಷಗಳ ಕಾಲ ಈ ಮಾನಸಿಕ ಪ್ರಾರ್ಥನಾ ವಿಧಾನವನ್ನು ಜತನದಿಂದ ಅಭ್ಯಾಸ ಮಾಡಿದಳು. ಆದರೂ ಅಪೇಕ್ಷಿಸಿದಷ್ಟು ಫಲವನ್ನು ಪಡೆದುಕೊಳ್ಳಲು ಅವಳು ಶಕ್ತಳಾಗಲಿಲ್ಲ.

ತೆರೆಸಾಳ ಈ ಸಮಸ್ಯೆಗಳಿಗೆ ಅವಳಿದ್ದ ಸಂನ್ಯಾಸಿನಿಯರ ಮಠದ ವಾತಾವರಣವೂ ಒಂದು ಕಾರಣವಾಗಿತ್ತು. ಮಠದಲ್ಲಿ ಆಧ್ಯಾತ್ಮಿಕ ಸಾಧನೆಗೆ ಉತ್ತೇಜನ ಇರಲಿಲ್ಲ. ತಾನು ಕಲಿತ ಮಾನಸಿಕ ಪ್ರಾರ್ಥನೆಯನ್ನು ಬರುವ ಸಂದರ್ಶಕರಿಗೆ ಬೋಧಿಸುವಂತೆ ಮಠದ ಅಧಿಕಾರಿಗಳು ಅವಳನ್ನು ಕೇಳಿಕೊಂಡರು. ಇದರಿಂದ ಮಠಕ್ಕೆ ವರಮಾನ ಬರುತ್ತಿತ್ತು. ಈ ಎಲ್ಲ ವ್ಯವಹಾರಗಳಲ್ಲಿ ಸಿಕ್ಕಿಹಾಕಿಕೊಂಡ ತೆರೆಸಾಳ ಆಧ್ಯಾತ್ಮಿಕ ಜೀವನ ಸಹಜವಾಗಿಯೇ ಕುಂದಿಹೋಗಿತ್ತು. ಆಕೆಯಲ್ಲಿ ದರ್ಪ, ಅಭಿಮಾನ, ಅಹಂಕಾರಗಳು ಮನೆಮಾಡಿದ್ದವು. ತೆರೆಸಾಳದು ಬಹಳ ಆಕರ್ಷಕ ವ್ಯಕ್ತಿತ್ವ. ಎಲ್ಲರೂ ಅವಳನ್ನು ಹೊಗಳುತ್ತಿದ್ದರು. ಅದೇ ರೀತಿ, ಬೇರೆಯವರು ಹೊಗಳುವುದನ್ನು ಅವಳೂ ಇಷ್ಟಪಡುತ್ತಿದ್ದಳು. ಇದಲ್ಲದೆ ಅವಳ ಸುತ್ತ ಹಲವಾರು ಕಾಡುಹರಟೆಗಳೂ ಬೆಳೆದುಕೊಂಡವು. ಹೀಗೆ ತೆರೆಸಾ ಭಗವಂತನನ್ನು ಮರೆತುಬಿಟ್ಟಳು. ಇದೇನೂ ಮಹಾಪಾತಕವಾಗಿರಲಿಲ್ಲ. ಆದರೂ ಈ ಬಗೆಯ ಜೀವನಶೈಲಿ ಅವಳನ್ನು ಭಗವಂತನಿಂದ ದೂರ ಮಾಡಿತು.

ಇದೇ ಸಮಯದಲ್ಲಿ ತೆರೆಸಾ ಮಲೇರಿಯಾದಿಂದ ನರಳಿದಳು. ಅದಲ್ಲದೆ ಮಧ್ಯೆ ಮಧ್ಯೆ ಅವಳಿಗೆ ವಿಪರೀತ ನಡುಕ ಬರುತ್ತಿತ್ತು. ಒಂದು ಬಾರಿಯಂತೂ ನಾಲ್ಕು ದಿನಗಳ ಕಾಲ ಅವಳು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಳು. ಇದನ್ನು ಕಂಡು ಅವಳು ಸತ್ತುಹೋಗುತ್ತಾಳೆಂದೇ ಎಲ್ಲರೂ ಭಾವಿಸಿದರು. ಅಂತ್ಯಕ್ರಿಯೆಗೆ ಗುಂಡಿಯನ್ನೂ ಅಗೆಸಿ ಇಟ್ಟಿದ್ದರು. ಆದರೆ ಅವಳು ಚೇತರಿಸಿಕೊಂಡಳು. ಇದಾದ ನಂತರ ತೆರೆಸಾಗೆ ಪಾರ್ಶ್ವವಾಯು ಬಡಿಯಿತು. ಮೂರು ವರ್ಷಗಳ ಕಾಲ ಅವಳು ನಿಸ್ತೇಜಳಾಗಿದ್ದಳು.

ಆಶ್ಚರ್ಯವೆಂದರೆ, ಇದರಿಂದ ಅವಳಲ್ಲಿ ಯಾವ ಆಧ್ಯಾತ್ಮಿಕ ಪ್ರಗತಿಯೂ ಉಂಟಾಗಲಿಲ್ಲ. ವ್ಯಾಧಿಯ ನೆಪಮಾಡಿಕೊಂಡು ಅವಳು ಪ್ರಾರ್ಥನೆಯ ಅಭ್ಯಾಸವನ್ನು ಸಂಪೂರ್ಣವಾಗಿ ನಿಲ್ಲಿಸಿಯೇ ಬಿಟ್ಟಳು. ಆದರೆ ಅವಳಿಗೆ ಒಬ್ಬಂಟಿಗಳಾಗಿ ಇರಲೂ ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ ನಿಶ್ಶಕ್ತಿ ಅವಳನ್ನು ಕಾಡುತ್ತಿತ್ತು. ಮುಂದಿನ ದಿನಗಳಲ್ಲಿ ತೆರೆಸಾ ಹೀಗೆ ಹೇಳುತ್ತಿದ್ದಳು: ''ಪ್ರಾರ್ಥನೆಯೆಂಬುದು ಪ್ರೇಮದ ಕಾರ್ಯ. ಅದಕ್ಕೆ ಪದಗಳು ಬೇಕಾಗಿಲ್ಲ. ಕಾಯಿಲೆಯಿಂದ ಈ ಬಗೆಯ ಚಿಂತನೆಗಳು ಪ್ರಕ್ಷುಬ್ಧವಾದರೂ, ಆವಶ್ಯಕವಾಗಿ ಬೇಕಾಗಿರುವುದು ಪ್ರೇಮಿಸುವುದಕ್ಕೆ ಬೇಕಾದ ಇಚ್ಛಾಶಕ್ತಿ.''

ಹಲವು ವರ್ಷಗಳಿಂದ ಅವಳ ಪ್ರಾರ್ಥನಾಶಕ್ತಿಯೇ ಉಡುಗಿಹೋಗಿತ್ತು. ''ಪಾಪಿಯಾದ ನಾನು ದೇವರ ಅನುಗ್ರಹಕ್ಕೆ ಪಾತ್ರಳಲ್ಲ'' ಎಂದು ಅವಳು ಭಾವಿಸಿದಳು. ಆದರೆ ಪ್ರಾರ್ಥನೆಯಿಂದ ದೂರ ಹೋಗುವುದು, ಅವಳೇ ಮುಂದೆ ಹೇಳಿದ ಪ್ರಕಾರ 'ತಾಯಿಯ ಮೊಲೆಹಾಲಿನಿಂದ ಮಗು ದೂರಹೋದಂತೆ' ಆಗಿತ್ತು. ಅದರಿಂದ ಮರಣವನ್ನಲ್ಲದೆ ಏನನ್ನು ತಾನೇ ಅಪೇಕ್ಷಿಸಲು ಸಾಧ್ಯ? ಹೀಗೆ ಆಧ್ಯಾತ್ಮಿಕ ಅವಸಾನದ ಅಂಚಿನಲ್ಲಿ ತೆರೆಸಾ ಇದ್ದಂತೆ ಪರಿಸ್ಥಿತಿ ನಿರ್ಮಾಣವಾಗಿತ್ತು.

ತೆರೆಸಾಗೆ ನಲವತ್ತೊಂದು ವರ್ಷ ವಯಸ್ಸಾಗಿದ್ದಾಗ, ಒಬ್ಬ ಪಾದ್ರಿಯು ಅವಳ ಸಹಾಯಕ್ಕೆ ಬಂದನು. ಮತ್ತೆ ಪ್ರಾರ್ಥನೆಯನ್ನು ಆರಂಭಮಾಡುವಂತೆ ಅವಳ ಮನ ಒಲಿಸಿದನು. ಮೊದಮೊದಲು ಪ್ರಾರ್ಥನೆಗೆ ಕುಳಿತುಕೊಳ್ಳಲೂ ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ಬೇಗನೆ ಈ ಪ್ರಾರ್ಥನೆ ಮುಗಿಯಬಾರದೆ ಎಂದು ಅನ್ನಿಸುತ್ತಿತ್ತು. ಆದರೂ ಬಹಳ ಪ್ರಯತ್ನಮಾಡಿದ ಮೇಲೆ ನಿಧಾನವಾಗಿ ತೆರೆಸಾಗೆ ಪ್ರಾರ್ಥನೆಯಲ್ಲಿ ಆಸಕ್ತಿ ಮೂಡಿತು. ಮನಸ್ಸು ಭಗವಂತನ ಧ್ಯಾನದಲ್ಲಿ ವಿಲೀನವಾಗತೊಡಗಿತು. ತೆರೆಸಾ ಭಗವಂತನಲ್ಲಿ ಏಕೀಭಾವವನ್ನು ಅನುಭವಿಸತೊಡಗಿದಳು. ಭಗವತ್ಪ್ರೇಮ ಅವಳನ್ನು ಸೂರೆಗೊಂಡಿತು. ಅವಳು ದಿವ್ಯದರ್ಶನಗಳನ್ನು ಹೊಂದತೊಡಗಿದಳು. ಈ ಅನುಭವಗಳು ಅವಳಲ್ಲಿ ಮಹಾನ್ ಪರಿವರ್ತನೆಯನ್ನು ಉಂಟುಮಾಡತೊಡಗಿದವು. ಭಗವಂತನ ತೇಜೋಮಯವಾದ ಅನುಗ್ರಹವು ತನ್ನ ಆತ್ಮವನ್ನು ಪುನೀತಗೊಳಿಸುತ್ತಿರುವುದನ್ನು ತೆರೆಸಾ ಸಾಕ್ಷಾತ್ತಾಗಿ ಅನುಭವಿಸತೊಡಗಿದಳು.

ಹೀಗೆ ತೆರೆಸಾ ಪ್ರಾರ್ಥನೆಯನ್ನು ಪುನರಾರಂಭಿಸಿದಾಗ, ಭಗವಂತನು ಅವಳಿಗೆ ಆಧ್ಯಾತ್ಮಿಕ ಉಲ್ಲಾಸವನ್ನು ನೀಡಿದನು. ಪ್ರಾರ್ಥನೆಯ ಆ ಶಾಂತಸ್ಥಿತಿಯಲ್ಲಿ ಭಗವತ್ಸಾನ್ನಿಧ್ಯವು ಅವಳ ಇಂದ್ರಿಯಗಳನ್ನು ಸೂರೆಗೊಂಡಿತು; ಭಗವಂತನು ತನ್ನ ಮಹಿಮೆಯ ಮೂಲಕ ಅವಳನ್ನು ಆವರಿಸಿಬಿಟ್ಟನು. ಭಗವಂತನೆಂಬ ಸೂರ್ಯನು ತನ್ನ ಆತ್ಮವನ್ನು ದ್ರವಿಸುವಂತಹ ಐಕ್ಯತಾಭಾವವನ್ನು ಅವಳು ಆ ದಿವ್ಯಸಮಯದಲ್ಲಿ ಅನುಭವಿಸಿದಳು. ಭಗವಂತನ ಧ್ಯಾನದಲ್ಲಿ ಸಂಪೂರ್ಣ ತನ್ಮಯಳಾಗುತ್ತಿದ್ದ ಅವಳ ದೇಹ ಒಮ್ಮೊಮ್ಮೆ ತಾನೇತಾನಾಗಿ ಮೇಲೇರುತ್ತಿತ್ತು. ಆದರೆ ಈ ಬಗೆಯ ಪವಾಡವನ್ನು ಸಾರ್ವಜನಿಕವಾಗಿ ಪ್ರದರ್ಶನ ಮಾಡಲು ತೆರೆಸಾಗೆ ಸ್ವಲ್ಪವೂ ಇಷ್ಟ ಇರಲಿಲ್ಲ. ಅಂಥ ಸಂದರ್ಭಗಳಲ್ಲಿ ಶರೀರವು ಏಳುವುದನ್ನು ತಡೆಯುವಂತೆ ಅವಳು ತನ್ನ ಸಹೋದರಿ ಸಂನ್ಯಾಸಿನಿಯರನ್ನು ಕೇಳಿಕೊಂಡಳು.

ತನ್ನ ಈ ಪ್ರಕ್ಷುಬ್ಧ ಆಧ್ಯಾತ್ಮಿಕ ಯಾತ್ರೆಯ ಬಗ್ಗೆ ತೆರೆಸಾ ತನ್ನ ಆತ್ಮಚರಿತ್ರೆಯಲ್ಲಿ ಹೀಗೆ ಬರೆಯುತ್ತಾಳೆ: ''(ನನ್ನ ಆ ಸಂಕಷ್ಟದ ದಿನಗಳಲ್ಲಿ) ಪ್ರಾರ್ಥನೆಯಲ್ಲಿ ತನ್ಮಯವಾಗುವ ಬದಲು ಆ ಅವಧಿ ಕೊನೆಗೊಳ್ಳುವುದನ್ನೇ ನಾನು ಹೆಚ್ಚು ಕಳವಳದಿಂದ ನಿರೀಕ್ಷಿಸುತ್ತಿದ್ದೆ. ಪ್ರಾರ್ಥನೆಯೆಂಬುದು ನನ್ನ ಪಾಲಿಗೆ ದೊಡ್ಡ ತಪಸ್ಸೇ ಆಗಿಬಿಟ್ಟಿತ್ತು. ಅದಕ್ಕಿಂತ ಹೆಚ್ಚಿನ ತಪಸ್ಸು ಇದೆ ಎಂದು ನನಗೆ ಅನ್ನಿಸುತ್ತಿರಲಿಲ್ಲ...'' ಒಮ್ಮೊಮ್ಮೆ ತೆರೆಸಾಳ ಮನಸ್ಸು ಬಹಳ ಪ್ರಕ್ಷುಬ್ಧವಾಗುತ್ತಿತ್ತು. ಆಗ ಅವಳ ಭಾವನೆ ಹೀಗಿರುತ್ತಿತ್ತು: ''ಈ ಬುದ್ಧಿಯೆಂಬುದು ಎಷ್ಟೊಂದು ಹೊಯ್ದಾಡುತ್ತಿತ್ತು ಎಂದರೆ, ಅದು ಉದ್ರೇಕಗೊಂಡ ಹುಚ್ಚನೊಬ್ಬನ

ಹಾಗೆ ಇತ್ತು. ಅದನ್ನು ನಿಯಂತ್ರಣ ಮಾಡಲು ಯಾರಿಗೂ ಸಾಧ್ಯವೇ ಇರಲಿಲ್ಲ.'' ತೆರೆಸಾ ಪ್ರಾರ್ಥನೆ ಮಾಡಲು ಕಷ್ಟಪಡು ವವರ ಮೇಲೆ ಹೀಗೆ ತುಂಬು ಅನುಕಂಪವನ್ನು ತೋರುತ್ತಾಳೆ: ''ಬಾಹ್ಯ ಜಗತ್ತಿನಲ್ಲಿ ಅನುಭವಿಸುವ ಕಷ್ಟ ನಷ್ಟಗಳನ್ನು ಈ ಆಂತರಿಕ ಯುದ್ಧಗಳಿಗೆ ಹೋಲಿಸಲಾಗುವುದೇ ಇಲ್ಲ.''

ಈ ಎಲ್ಲ ಕಡುಕಷ್ಟಗಳ ನಂತರ ಅವಳು ಮಾನಸಿಕ ಪ್ರಾರ್ಥನೆ ಯಲ್ಲಿ ಮಗ್ನಳಾದಳು. ಅದನ್ನು ಅವಳು ಹೀಗೆ ಬಣ್ಣಿಸುತ್ತಾಳೆ: ''ಮಾನಸಿಕ ಪ್ರಾರ್ಥನೆಯೆಂದರೇನು? ನನ್ನ ಅಭಿಪ್ರಾಯದ ಪ್ರಕಾರ, ಇದು ಇಬ್ಬರು ಸ್ನೇಹಿತರ ನಡುವಿನ ಆಪ್ತಸಂವಹನವಲ್ಲದೆ ಬೇರೆಯಲ್ಲ. ಹಾಗೆಯೇ 'ನಮ್ಮನ್ನು ಅತ್ಯಂತ ಪ್ರೀತಿಸುವವನು' ಎಂದು ಯಾರ ಬಗ್ಗೆ ನಾವು ತಿಳಿದುಕೊಂಡಿರುವೆವೋ, ಆ ಪರ ಮಾತ್ಮನ ಜೊತೆಗೆ ಕೆಲಕಾಲವನ್ನು ಏಕಾಂತವಾಗಿ ಮತ್ತೆ ಮತ್ತೆ ಕಳೆಯುವುದೇ ಮಾನಸಿಕ ಪ್ರಾರ್ಥನೆ ಎಂದೆನಿಸಿಕೊಳ್ಳುತ್ತದೆ. ಇಲ್ಲಿ ಮುಖ್ಯವಾದ ಸಂಗತಿ ಭಗವಂತನ ಬಗ್ಗೆ ಚಿಂತಿಸುವುದಲ್ಲ, ಅದಕ್ಕೆ ಬದಲಾಗಿ ಅವನನ್ನು ಹೆಚ್ಚು ಹೆಚ್ಚು ಪ್ರೀತಿಸುವುದು ಹಾಗೂ ಆ ಪ್ರೇಮವು ಅಧಿಕಗೊಳ್ಳಲು ಏನು ಮಾಡಬೇಕೋ ಅದನ್ನೆಲ್ಲ ಮಾಡುವುದು. ಪ್ರೇಮವೆಂದರೆ ಏನು? ಇದೇನೂ ಮಹಾನ್ ಆನಂದವಲ್ಲ, ಆದರೆ ಎಲ್ಲ ವಿಧದಲ್ಲೂ ಭಗವಂತನನ್ನು ತುಷ್ಟಿ ಗೊಳಿಸಬೇಕು ಎಂಬ ಮಹದಾಸೆ. ಇದೇ ಪ್ರೇಮವೆನಿಸಿಕೊಳ್ಳುತ್ತದೆ.'' ಹೀಗೆ ತನ್ನ ಪುಸ್ತಕಗಳಲ್ಲಿ ತೆರೆಸಾ ತಾನು ಪಡೆದ ಅತೀಂದ್ರಿಯ ಅನುಭವಗಳನ್ನು ಒಬ್ಬ ವಿಜ್ಞಾನಿಯ ಹಾಗೆ ವಿಶ್ಲೇಷಿಸುತ್ತಾಳೆ.

ಇಷ್ಟಾದರೂ ಕೆಲವರಿಗೆ ತೆರೆಸಾಳ ಆಧ್ಯಾತ್ಮಿಕ ಅನುಭವಗಳು ಅಧಿಕೃತವಾದುವು ಎಂದೆನಿಸಲಿಲ್ಲ. ಅವಳು ದೆವ್ವದ ಪ್ರಭಾವಕ್ಕೆ ಒಳ ಗಾಗಿದ್ದಾಳೆ ಎಂದು ಜನರು ನಂಬಿದರು. ಆದರೆ ದೇವರು ಅವಳಲ್ಲಿ ವಿಶ್ವಾಸ ತುಂಬಿದನು. ತನ್ನ ಆತ್ಮಚರಿತ್ರೆಯಲ್ಲಿ ತೆರೆಸಾ ಹೀಗೆ ಬರೆಯುತ್ತಾಳೆ, ''ನಾನು ದೆವ್ವಕ್ಕೆ ಹೆದರುವುದಕ್ಕಿಂತಲೂ ದೆವ್ವದ ಬಗ್ಗೆ ನನ್ನನ್ನು ಹೆದರಿಸುವವರನ್ನು ಕಂಡು ಹೆಚ್ಚು ಹೆದರುತ್ತೇನೆ'' ಎಂದು. ದೆವ್ವದ ಬಗ್ಗೆ ಭಯಪಡುವುದಲ್ಲ , ಅದಕ್ಕೆ ಬದಲಾಗಿ ಭಗವಂತನ ಚಿಂತನೆಯನ್ನು ಮಾಡುತ್ತ ಅದರ ಜೊತೆಗೆ ಹೋರಾಟ ಮಾಡಬೇಕು ಎನ್ನುವುದೇ ತೆರೆಸಾಳ ನಿಲುವಾಗಿತ್ತು. ಈ ಅನು ಭವಗಳು ತೆರೆಸಾಗೆ ಆಂತರಿಕ ಶಾಂತಿ, ಸ್ಫೂರ್ತಿ ಮತ್ತು ಉತ್ಸಾಹವನ್ನು ತುಂಬಿದವು. ತನ್ನೆಲ್ಲ ಹರ್ಷೋದ್ವೇಗಗಳು ಭಗವಂತನ ವರ ಪ್ರಸಾದವೇ ಎಂದು ಇದರಿಂದ ತೆರೆಸಾಗೆ ಮನವರಿಕೆಯಾಯಿತು.

ಆದರೂ ತನ್ನ ಸುತ್ತಲಿನ ಜನರ ಕಟುಟೀಕೆಗಳಿಂದ ಅವಳ ಮನಸ್ಸಿಗೆ ಬೇಸರ ಉಂಟಾಗುತ್ತಿತ್ತು. ಅದನ್ನು ಅವಳು ತನ್ನ ಆಪ್ತಮಿತ್ರರಲ್ಲಿ ತೋಡಿಕೊಂಡಿದ್ದಳು ಕೂಡ. ಈ ಸಂದರ್ಭ ದಲ್ಲಿ ಅವಳಿಗೆ ಏಸುಕ್ರಿಸ್ತನು ದರ್ಶನ ಕೊಟ್ಟು ಹೀಗೆ ಹೇಳಿದನು, ''ತೆರೆಸಾ, ನಾನು ನನ್ನ ಸ್ನೇಹಿತರ ಜೊತೆಗೆ ವ್ಯವಹರಿಸುವುದು ಹೀಗೆಯೇ.'' ಅದಕ್ಕೆ ತೆರೆಸಾ ತಿರುಗೇಟು ಕೊಟ್ಟಳಂತೆ: ''ಹೌದು, ಅದಕ್ಕೆಂದೇ ನಿನಗೆ ಸ್ನೇಹಿತರು ಬಹಳ ಕಡಮೆ'' ಎಂದು.

ತೆರೆಸಾಗೆ ಈಗ ನಲುವತ್ತಮೂರು ವರ್ಷ ವಯಸ್ಸು. ಧ್ಯಾನ ಮಗ್ನ ಜೀವನಕ್ಕೆ ಒತ್ತುಕೊಡುವಂಥ ನೂತನ ಸಂನ್ಯಾಸಿನಿಯರ ಮಠವನ್ನು ಸ್ಥಾಪಿಸಬೇಕೆಂದು ಅವಳು ನಿಶ್ಚಯಿಸಿದಳು. ಪ್ರಾರ್ಥನೆಗೆ ಮೀಸಲಾದ ಸರಳ ಬಡತನದ ಜೀವನವನ್ನು ಸಂನ್ಯಾಸಿನಿಯರು ಅಲ್ಲಿ ನಡೆಸಬೇಕು ಎಂದು ಆಕೆ ಬಯಸಿದಳು. ಈ ಪ್ರಸ್ತಾವನೆಗೆ ಮೊದಮೊದಲು ಬಹಳ ವಿರೋಧ ಬಂತು. ಅವಳನ್ನು ಹೀನಾಯ ವಾಗಿ ನಡೆಸಿಕೊಳ್ಳಲಾಯಿತು. ಹಲವಾರು ರೀತಿಯ ಕಿರುಕುಳನ್ನು ಅವಳು ಎದುರಿಸಿದಳು. ಅವಳ ಮೇಲೆ ಕಾನೂನು ಮೊಕದ್ದಮೆ ಯನ್ನೂ ಹೂಡಲಾಯಿತು. ಇಷ್ಟಾದರೂ ಶಾಂತಮನಸ್ಸಿನಿಂದ ಅವಳು ಮುನ್ನಡೆದಳು. ತನ್ನ ಧ್ಯೇಯವನ್ನು ಸಾಧಿಸಿದಳು. ಭಗ ವಂತನಲ್ಲಿ ಅವಳಿಗಿದ್ದ ವಿಶ್ವಾಸವೇ ಅವಳನ್ನು ಕಾಪಾಡಿತು. ಸಂತ ಜೋಸೆಫ್ ಸಂನ್ಯಾಸಿನಿಯರ ಮಠವನ್ನು ಅವಳು ಕೊನೆಗೂ ಹುಟ್ಟುಹಾಕಿದಳು.

ತೆರೆಸಾ ಪಾಲಿಗೆ ಆಧ್ಯಾತ್ಮಿಕ ಜೀವನವೆಂದರೆ ಪ್ರೇಮ ಭಾವ ನೆಯೇ ಆಗಿತ್ತು, ನಿಯಮಗಳ ಕಂತೆಯಲ್ಲ. ಕಠಿಣ ತಪಸ್ಸಿಗಿಂತಲೂ ಭಗವಂತನಲ್ಲಿ ವಿಧೇಯತೆಗೇ ಅವಳು ಬಹಳ ಮಹತ್ವ ನೀಡು ತ್ತಿದ್ದಳು. ಬಡತನವನ್ನು ಅವಳು ಪ್ರತಿಪಾದಿಸಿದಳಾದರೂ, ಕೆಲಸ ದಲ್ಲಿ ಅವಳಿಗೆ ನಂಬಿಕೆ ಇತ್ತೇ ಹೊರತು, ಬೇಡುವುದರಲ್ಲಲ್ಲ. ''ನೀವು ಏನಾದರೂ ತಪ್ಪು ಮಾಡಿದರೆ, ನಿಮ್ಮನ್ನು ನೀವು ಶಿಕ್ಷೆಗೆ ಗುರಿಪಡಿಸಿ ಕೊಳ್ಳಬೇಡಿ. ಅದಕ್ಕೆ ಬದಲಾಗಿ ಪರಿವರ್ತನೆಗೊಳ್ಳಿ'' ಎಂದು ಅವಳು ಹೇಳುತ್ತಿದ್ದಳು. ಯಾರಾದರೂ ಖಿನ್ನರಾಗಿದ್ದರೆ, ಹೊರಕ್ಕೆ ಹೋಗಿ ಮುಕ್ತ ಆಕಾಶವನ್ನು ದಿಟ್ಟಿಸುತ್ತ ನಡೆದಾಡುವಂತೆ ಅವಳು ಸಲಹೆ ಕೊಡುತ್ತಿದ್ದಳು. ಅತ್ಯಂತ ಶಕ್ತಿಶಾಲಿ ಹಾಗೂ ಸರ್ವಸಮ್ಮತ ಪ್ರಾರ್ಥನೆ ಯೆಂದರೆ ನಮ್ಮನ್ನು ಕಾರ್ಯೋನ್ಮುಖವಾಗಿಸುವ ಪ್ರಾರ್ಥನೆಯೇ ಎಂದು ಬಲವಾಗಿ ನಂಬಿದ್ದಳು. ಒಬ್ಬನ ಒಳ್ಳೆಯ ಭಾವನೆಗಳಿಗಿಂತ ಒಳ್ಳೆಯ ಕಾರ್ಯಗಳೇ ಮುಖ್ಯ; ಅವುಗಳಿಂದ ಮಾತ್ರ ಒಳ್ಳೆಯ ಪ್ರಾರ್ಥನೆ ಸಾಧ್ಯ ಎಂದು ಅವಳು ಸಲಹೆ ಕೊಡುತ್ತಿದ್ದಳು. ಇದ ರಂತೆಯೇ ತಾನೂ ಕೂಡ ಯಾವಾಗಲೂ ಕಾರ್ಯೋನ್ಮುಖಳಾಗಿ ರುತ್ತಿದ್ದಳು; ಬಹಳಷ್ಟು ಸಮಯವನ್ನು ಪುಸ್ತಕಗಳನ್ನು ಬರೆಯುವು ದರಲ್ಲಿ ಕಳೆಯುತ್ತಿದ್ದಳು. ಅವುಗಳಲ್ಲಿ ತನ್ನ ಅನುಭವಗಳನ್ನು ಅವಳು ಸುದೀರ್ಘವಾಗಿ ದಾಖಲಿಸಿದ್ದಾಳೆ.

ತೆರೆಸಾ ತನ್ನ ಐವತ್ತೊಂದನೆಯ ವಯಸ್ಸಿನಲ್ಲಿ ತಾನು ಸ್ಥಾಪಿಸಿದ ಈ ಸುಧಾರಣಾ ಸಂನ್ಯಾಸಿನಿ ಪಂಥದ ಆಂದೋಲನವನ್ನು ಬೇರೆ ಬೇರೆ ಕಡೆ ಹರಡುವ ಕೆಲಸವನ್ನು ಮಾಡಿದಳು. ಬಹಳ ಕಷ್ಟಪಟ್ಟು ಮತ್ತೂ ಹಲವು ಸಂನ್ಯಾಸಿನಿಯರ ಮಠಗಳನ್ನು ಸ್ಥಾಪಿಸಿದಳು. ಇದಲ್ಲದೆ ತನ್ನ ಪಂಥದ ಸಂನ್ಯಾಸಿಗಳು ಮತ್ತು ಸಂನ್ಯಾಸಿನಿ ಯರಿಂದಲೇ ಹಲವಾರು ಬಗೆಯ ವಿರೋಧಗಳನ್ನು ಅವಳು ಎದುರಿಸಬೇಕಾಯಿತು. ಹಲವಾರು ರೀತಿಯ ಕಷ್ಟನಷ್ಟಗಳನ್ನು ಅನು ಭವಿಸಬೇಕಾಯಿತು. ಆದರೆ ಭಗವಂತನ ಅನುಗ್ರಹದಿಂದ ಇವೆಲ್ಲ ಅಡೆತಡೆಗಳು ಬೇಗನೆ ಮರೆಯಾದವು. ಜನರು ಅವಳ ಸಂನ್ಯಾಸಿನಿ ಮಠಗಳಿಗೆ ಬರಲಾರಂಭಿಸಿದರು; ಅವಳಿಂದ ಪ್ರಾರ್ಥನಾ ವಿಧಾನ ವನ್ನು ಕಲಿಯಲಾರಂಭಿಸಿದಳು. ಪ್ರಾರ್ಥನೆಯ ಬಗೆಗಿನ ಅವಳ ಭಾವನೆಗಳು ನೋಡನೋಡುತ್ತಲೇ ಸ್ಪೈನ್ ದೇಶದಾದ್ಯಂತ ಮಾತ್ರ ವಲ್ಲ, ಇಡೀ ಯೂರೋಪು ಖಂಡದಲ್ಲೆಲ್ಲ ಹರಡಲಾರಂಭಿಸಿದವು.